ನಮಗೆ ಆಧಾರವಾಗಬೇಕು. ಶ್ರೀ ಗೋಪಾಲಕೃಷ್ಣ ಅಡಿಗರ ಕವನದ ಈ ಕೆಲವು ಸಾಲುಗಳು ನಿಮ್ಮ ಬಾಳಿಗೆ ಬೆಳಕಾಗಿ ಮೂಡಲಿ:

ನಿನಗೆ ನೀನೇ ಗೆಳೆಯ
ಅವರಿವರ ನಂಬುಗೆಯ ಮಳಲರಾಶಿಯ ಮೇಲೆ
ಬಾಳ ಮನೆಯನ್ನು ಮುಗಿಲಿಗೆತ್ತರಿಸಲಿಹೆಯಾ?
ಬಾಳ ಕಾಳಗದಲ್ಲಿ ಏಕಾಂಗಿವೀರ
ನಿನ್ನ ಅಂತಃಸತ್ವ ನಿನಗೆ ಆಧಾರ

೧೦. ಮೇಲೆ ಹೇಳಿದ ತಯಾರಿಯೊಂದಿಗೆ ಪರೀಕ್ಷೆಯ ದಿನಕ್ಕೆ ಸನ್ನದ್ಧರಾಗಿ. ಪರೀಕ್ಷೆಯ ಹಿಂದಿನ ರಾತ್ರಿ ಸಾಕಷ್ಟು ನಿದ್ರೆಯನ್ನು ಮಾಡಿ. ಮಾರನೆಯ ದಿನ ಬೆಳಗ್ಗೆ ಲವಲವಿಕೆಯಿಂದ ಏಳಿರಿ.

## ಪರೀಕ್ಷಾ ಕೊಠಡಿಯಲ್ಲಿ ಏನು ಮಾಡಬೇಕು?

೧. ಪರೀಕ್ಷೆಗೆ ತೆಗೆದುಕೊಂಡು ಹೋಗಬೇಕಾದ ಪ್ರವೇಶ ಪತ್ರ, ಪೆನ್ ಮುಂತಾದವನ್ನು ಸರಿಯಾಗಿ ತೆಗೆದಿರಿಸಿಕೊಳ್ಳಿ. ಬೇಡದ ಕಾಗದಗಳು, ಟಿಪ್ಪಣಿಯ ಚೂರುಗಳು – ಇವು ಯಾವುವೂ ಇಲ್ಲವೆಂದು ಖಚಿತ ಪಡಿಸಿಕೊಳ್ಳಿ.

೨. ಮೊದಲನೆಯ ಗಂಟೆ ಹೊಡೆಯುತ್ತಲೇ ಕೊಠಡಿಯನ್ನು ಪ್ರವೇಶಿಸಿ. ಅದಕ್ಕೆ ಮುಂಚೆ ನಿಮ್ಮ ಸ್ನೇಹಿತರೊಡನೆ ಯಾವುದೇ ರೀತಿಯ ಚರ್ಚೆ, ವಾಗ್ವಾದ ಮಾಡಬೇಡಿ. ಸಕಾಲಕ್ಕೆ, ಪ್ರಸನ್ನಭಾವದಿಂದ ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಿರಿ.

೩. ಎರಡನೆಯ ಗಂಟೆ ಹೊಡೆಯುವವರೆಗೆ ಶಾಂತಚಿತ್ತರಾಗಿ ಕುಳಿತುಕೊಂಡಿರಿ; ಹಸನ್ಮುಖಿಗಳಾಗಿರಿ; ಹತ್ತಾರು ಬಾರಿ ದೀರ್ಘ ಉಸಿರಾಟವನ್ನು ಮಾಡಿ. ಇದರಿಂದ ನಿಮ್ಮ ಮನಸ್ಸು ಹಗುರವಾಗುತ್ತದೆ. ಉತ್ತರಗಳು ನಿಮಗೆ ಸರಾಗವಾಗಿ ಹೊಳೆಯಲಾರಂಭಿಸುತ್ತವೆ.

೪. ಪ್ರಶ್ನೆಪತ್ರಿಕೆಯನ್ನು ಒಮ್ಮೆ ನಿಧಾನವಾಗಿ ಪೂರ್ತಿ ಓದಿ ಕೊಳ್ಳಿ. ಆ ಸಮಯದಲ್ಲಿ ಗಾಬರಿ ಆಗಬೇಡಿ. ಓದುವಾಗ ಗೊಂದಲ ಮಾಡಿಕೊಳ್ಳಬೇಡಿ. ಉದಾಹರಣೆಗೆ **nephron** ಎಂದಿರುವ ಕಡೆ **neuron** ಎಂದು ಓದಬೇಡಿ.

೫. ಮೊದಲು ಸುಲಭವಾದ ಪ್ರಶ್ನೆಗಳನ್ನು ಆಯ್ಕೆ ಮಾಡಿಕೊಂಡು, ಅವುಗಳಿಗೆ ಅತ್ಯುತ್ತಮವಾಗಿ ಉತ್ತರ ಬರೆಯಿರಿ.

೬. ನಿಮ್ಮ ಬರವಣಿಗೆ ದುಂಡಾಗಿ, ಅಂದವಾಗಿರಲಿ. ಅದಕ್ಕಾಗಿ ಬಹಳ ಮುಂಚಿನಿಂದಲೇ ಅಭ್ಯಾಸ ಮಾಡಬೇಕು.

೭. ಎರಡು ಪ್ರಶ್ನೆಗಳ ಉತ್ತರಗಳ ನಡುವೆ ಸಾಕಷ್ಟು ಅಂತರವಿರಲಿ.

೮. ಚಿತ್ರಗಳನ್ನು ಸುಂದರವಾಗಿ ಬಿಡಿಸಿರಿ. ಅದರ ಭಾಗಗಳನ್ನು ಸಂದೇಹಕ್ಕೆ ಅವಕಾಶ ಇಲ್ಲದಂತೆ, ಅಚ್ಚುಕಟ್ಟಾಗಿ ಗುರುತಿಸಿರಿ.

೯. ಯಾವುದಾದರೂ ಮರೆತುಹೋಗಿದ್ದ ಮಾಹಿತಿ ಮತ್ತೆ ಜ್ಞಾಪಕಕ್ಕೆ ಬಂದರೆ, ಅದನ್ನು ಅದು ಬರಬೇಕಾದ ಜಾಗದಲ್ಲಿಯೇ ಬರೆಯಿರಿ.

೧೦. ಉತ್ತರ ಬರೆಯುವಾಗ ನಿಮ್ಮ ಪೂರ್ಣ ಗಮನ ಉತ್ತರಗಳ ಮೇಲೆ ಮಾತ್ರ ಇರಲಿ. ಸುತ್ತ ಏನೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ಲಕ್ಷ್ಯ ಕೊಡಬೇಡಿ.

ವಾರ್ತಾ ವಿಶ್ಲೇಷಣೆ

## ಅವಲಂಬನೆಯ ಆವಶ್ಯಕತೆ

ಸಮಾಜವು ಮಕ್ಕಳನ್ನು ಅತಿ ವೇಗ ಬೆಳೆಯುವಂತೆ ಒತ್ತಾಯ ಹೇರುತ್ತಿದೆ ಎಂದು ಇಂಗ್ಲೆಂಡಿನ ಆ್ಯಂಗ್ಲಿಕನ್ ಚರ್ಚ್‌ನ ಮುಖ್ಯಸ್ಥರಾದ ರೆವರೆಂಡ್ ಡಾ. ರೋವಾನ್ ವಿಲಿಯಮ್ಸ್ ಅವರು ತಮ್ಮ ೨೦೦೯ ರ ಕ್ರಿಸ್‌ಮಸ್ ಸಂದೇಶದಲ್ಲಿ ಹೇಳುತ್ತಾರೆ. ಅವರ ಪ್ರಕಾರ, ಮಕ್ಕಳಿಗೆ ನಾವು ನೀಡಬೇಕಾದದ್ದು 'ಪೋಷಣೆ ಮತ್ತು ಸುಭದ್ರತೆ'ಗಳನ್ನು. ಇವನ್ನು ಬಿಟ್ಟು ಬರಿ ಸ್ವಾತಂತ್ರ್ಯವನ್ನು ಮಾತ್ರ ಕೊಟ್ಟರೆ, ಅದು 'ಪರಿತಾಪ ಮತ್ತು ಶೋಷಣೆ'ಗಳಿಗೆ ಮಕ್ಕಳನ್ನು ದೂಡುತ್ತದೆ. 'ಅವಲಂಬನೆ'ಯನ್ನು ಕೇವಲ ಕನಿಕರ ಮತ್ತು ಕಳವಳಗಳಿಂದ ಕಾಣುವ ಸಂಸ್ಕೃತಿಯನ್ನು ಸಮಾಜವು ಸೃಷ್ಟಿಸಿದೆ. ಇದು ತಪ್ಪು. 'ಅವಲಂಬನೆ' ಅನ್ನುವುದು ನಿಸರ್ಗದಲ್ಲಿಯೇ ಇದೆ. ಎಲ್ಲರೂ ಜೀವಿತಕ್ಕಾಗಿ ಗಾಳಿ ಮತ್ತು ಆಹಾರಗಳ ಮೇಲೆ ಅವಲಂಬಿತರಾಗಿದ್ದಾರೆ. ಹಾಗೆಯೇ ಎಲ್ಲ ಮಕ್ಕಳೂ 'ಕಲಿಕೆ' ಮತ್ತು 'ಬೆಳವಣಿಗೆ'ಗಾಗಿ ತಮ್ಮ ತಂದೆತಾಯಿಗಳ ಮೇಲೆ ಅವಲಂಬಿತರಾಗಿರುತ್ತಾರೆ. ಸ್ವಚ್ಛಂದ ಪ್ರವೃತ್ತಿಯ ಸಂಸ್ಕೃತಿಯು ಮಕ್ಕಳಿಗೆ, ವೃದ್ಧರಿಗೆ ಮತ್ತು ಅಂಗವಿಕಲರಿಗೆ ಹಾನಿಕರ. ನಾವು ಅವರಿಗೆ, "ನೀವು ನಿಮ್ಮ ಎರಡು ಕಾಲುಗಳ ಮೇಲೆ ನಿಲ್ಲಲಾಗದೆ ಹೋದರೆ, ನಿಯಮಿತವಾಗಿ ನಿಮಗೆ ಸಹಾಯ ಬೇಕಾದರೆ, ನೀವು ನಿಜವಾಗಿಯೂ ಅಸಹಜ ವ್ಯಕ್ತಿಗಳು" ಎಂಬ ತಪ್ಪು ಸಂದೇಶವನ್ನು ರವಾನಿಸುತ್ತಿದ್ದೇವೆ. ಡಾ. ವಿಲಿಯಮ್ಸ್ ಮುಂದುವರಿದು ಹೀಗೆ ಹೇಳುತ್ತಾರೆ: ಮಕ್ಕಳನ್ನು ಗ್ರಾಹಕರನ್ನಾಗಿ ಅಥವಾ ಪ್ರದರ್ಶಕರನ್ನಾಗಿ ಎಷ್ಟು ಬೇಗ ಮಾಡಬಹುದು ಎಂಬ ಹವಣಿಕೆಯಲ್ಲಿಯೇ ನಾವೆಲ್ಲರೂ ಇರುತ್ತೇವೆ. ಅದಕ್ಕಾಗಿಯೇ ಅವರನ್ನು ಶಾಲೆಗಳಲ್ಲಿ ಸತತವೂ ಪರೀಕ್ಷೆಗೆ ಒಳಪಡಿಸುತ್ತೇವೆ. ಹೀಗೆ ವಾಸ್ತವಿಕತೆಯತ್ತ ಅವರನ್ನು ಕರೆದೊಯ್ಯುವ ನಮ್ಮ ಪ್ರಯತ್ನದಲ್ಲಿ, ಅವರ ಬಾಲ್ಯಜೀವನದ ಅವಧಿಯನ್ನು ಮೊಟಕುಗೊಳಿಸಲು ಹಾಗೂ ದುಃಖದಾಯಕವನ್ನಾಗಿ ಮಾಡಲು ಏನು ಬೇಕೋ ಅವೆಲ್ಲವನ್ನೂ ನಾವು ಮಾಡುತ್ತಿದ್ದೇವೆ. ಮಕ್ಕಳು ತಮ್ಮ ಮೇಲೆ ಅವಲಂಬಿತವಾಗಿರುವುದನ್ನು ಪೋಷಕರು ದೊಡ್ಡ ನಿಧಿಯಂತೆ ಪರಿಗಣಿಸಬೇಕು. ಕೃತಜ್ಞತಾಪೂರ್ವಕವಾಗಿ ಇತರರ ಮೇಲೆ ನಾವು ಅವಲಂಬಿತರಾಗಲು ಕಲಿತುಕೊಳ್ಳಬೇಕು. ಹೀಗೆ ಮಾಡಿದಾಗ ಮಾತ್ರವೇ, ಇತರರ ಅವಲಂಬನೆಗೆ ಪ್ರತಿಕ್ರಿಯೆ ನೀಡುವುದನ್ನು ಮತ್ತು ಗಮನವೀಯುವುದನ್ನು ನಾವು ಕಲಿಯುತ್ತೇವೆ. ಇದರಿಂದ ನೈಜ ಅವಲಂಬನೆಯನ್ನು ಗುರುತಿಸುವ ಮತ್ತು ರಕ್ಷಿಸುವ ಸಮಾಜವನ್ನು ನಾವು ಸೃಷ್ಟಿಸಿದ ಹಾಗೆ ಆಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಅಧಿಕಾರಶಾಹಿಗಳು ಮತ್ತು ಲೋಭಿಗಳಿಂದ ಅಪಮಾನಗೊಳ್ಳುವುದಾಗಲಿ ಅಥವಾ ಶೋಷಣೆಗೆ ಒಳಪಡುವುದಾಗಲಿ ಸಾಧ್ಯವಾಗದು. ಇದು ಡಾ. ವಿಲಿಯಮ್ಸ್ ಅವರ ಅಭಿಪ್ರಾಯ.


ಸ್ವಾರ್ಥಪ್ರಜ್ಞೆಯಿಂದ ಪ್ರೇರಿತವಾದ ಸ್ವಚ್ಛಂದ ಪ್ರವೃತ್ತಿಯಿಂದ ಮಾನವಕಲ್ಯಾಣ ಅಸಾಧ್ಯ. ಹೀಗಾಗಿ ಸಮಾಜವು ಸುಭದ್ರತೆಯನ್ನು, ಪೋಷಣೆಯನ್ನು ನೀಡುವ ತಾಯಿಯ ಸ್ಥಾನದಲ್ಲಿ ಇರಬೇಕು. ಹಾಗೆಯೇ ಜನರು ಕೂಡ ತಮ್ಮ ಸಹಜನರ ಮೇಲೆ ಅವಲಂಬಿತರಾಗುವುದನ್ನು ಕಲಿಯಬೇಕು. ಅಂದರೆ ನಾವೆಲ್ಲರೂ ಇತರರ ಬಗ್ಗೆ ನಮ್ಮ ಮನೋಭಾವವನ್ನು ಬದಲಿಸಿಕೊಳ್ಳಬೇಕು. ನಮ್ಮ ಒಡನಾಡಿಗಳಿಗೆ ರಕ್ಷಣೆಯನ್ನೂ ಸಾಂತ್ವನವನ್ನೂ ನೀಡಲು ಮುಂದಾಗಬೇಕು. ಹಾಗೆಯೇ ಇತರರಿಂದ ಅವುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಲೂ ಸಿದ್ಧರಿರಬೇಕು. ಏಕೆಂದರೆ, ಸಮಾಜವೆಂದರೆ ನಾವೇ ತಾನೇ ಅಲ್ಲವೆ? ನಮಗಿಂತ ಬೇರೆಯಾದ ಸಮಾಜವನ್ನು ಕಲ್ಪಿಸಿಕೊಳ್ಳಲು ಸಾಧ್ಯವೆ?

## ಧಾರಾವಾಹಿ

# ಬನ್ನಿ ಬೇಲೂರು ಮಠಕ್ಕೆ

*(ಡಿಸೆಂಬರ್ ೨೦೦೯ ರ ಸಂಚಿಕೆಯಿಂದ )*

**ಸ್ವಾಮಿ ಆಶುತೋಷಾನಂದ**



**ಬೇ**ಲೂರು ಮಠದ ನೂತನ ದೇವಾಲಯದ ಉದ್ಘಾಟನೆಯನ್ನು ಆಗ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ವಿಜ್ಞಾನಾನಂದರು, ೧೯೩೮ ಜನವರಿ ೧೪, ಮಕರ ಸಂಕ್ರಾತಿಯ ಶುಭದಿನದಂದು ನೆರವೇರಿಸಿದರು. ದೇವಮಂದಿರದ ಸಮರ್ಪಣಾ ಕಾರ್ಯಕ್ರಮದ ನಂತರ ಅವರು ಹೇಳಿದರು, “ನಾನು ಸ್ವಾಮೀಜಿಗೆ ಹೇಳಿದೆ, ‘ಸ್ವಾಮೀಜಿ, ನೀವು ದೇವಾಲಯದ ಉದ್ಘಾಟನೆಯನ್ನು ಮೇಲಿನಿಂದ ನೋಡುತ್ತೇನೆ ಎಂದು ಹೇಳಿದ್ದಿರಿ. ಇಗೋ, ನೋಡಿ. ನೀವು ಪ್ರತಿಷ್ಠಾಪಿಸಿದ ಶ್ರೀರಾಮಕೃಷ್ಣರನ್ನು ಈ ನೂತನ ದೇವಸ್ಥಾನದಲ್ಲಿ ಕುಳ್ಳಿರಿಸಲಾಗಿದೆ. ಇದನ್ನು ನೀವು ರಚಿಸಿದ ವಿನ್ಯಾಸದ ಪ್ರಕಾರವೇ ಕಟ್ಟಲಾಗಿದೆ.’ ಅನಂತರ ನಾನು, ಅದೋ ಅಲ್ಲಿ (ನೈರುತ್ಯ ದಿಕ್ಕಿನಲ್ಲಿ), ಸ್ವಾಮೀಜಿ, ಸ್ವಾಮಿ ಬ್ರಹ್ಮಾನಂದಜಿ, ಸ್ವಾಮಿ ಶಿವಾನಂದಜಿ, ಸ್ವಾಮಿ ಶಾರದಾನಂದಜಿ, ಸ್ವಾಮಿ ತುರೀಯಾನಂದಜಿ ಮತ್ತು ಸ್ವಾಮಿ ಅಖಂಡಾನಂದಜಿ – ಇವರೆಲ್ಲರೂ ಆನಂದದಿಂದ ಈ ಕಾರ್ಯಕ್ರಮವನ್ನು ವೀಕ್ಷಿಸುತ್ತಿರುವುದನ್ನು, ಆಶೀರ್ವದಿಸುತ್ತಿರುವುದನ್ನು ಕಣ್ಣಾರೆ ಕಂಡೆ.”

ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣರ ಸಾನ್ನಿಧ್ಯದ ಬಗ್ಗೆ ಸ್ವಾಮಿ ಶಿವಾನಂದಜಿ ಹೀಗೆ ಹೇಳುತ್ತಾರೆ, “ಶ್ರೀರಾಮಕೃಷ್ಣರು ತಮ್ಮೆಲ್ಲ ವೈಭವದಿಂದ ಇಲ್ಲಿ ವಿರಾಜಮಾನರಾಗಿದ್ದಾರೆ. ದಕ್ಷಿಣೇಶ್ವರದಲ್ಲಿ ಅವರೊಡನೆ ನಾವು ಹೇಗೆ ಇರುತ್ತಿದ್ದೆವೋ, ಮಾತನಾಡುತ್ತಿದ್ದೆವೋ ಅದೇ ರೀತಿಯಲ್ಲಿ ಇಲ್ಲಿಯೂ ಅವರ ಸಾನ್ನಿಧ್ಯದಲ್ಲಿ ನಾವೆಲ್ಲ ಇದ್ದೇವೆ. ಅವರ ಪವಿತ್ರ ಸಾನ್ನಿಧ್ಯದಲ್ಲಿ ನಮ್ಮ ಮನಸ್ಸು ಆನಂದದಿಂದ ತುಂಬಿ ತುಳುಕಾಡುತ್ತಿದೆ.”

ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣರ ಚಿರಂತನ ಸಾನ್ನಿಧ್ಯವನ್ನು ಕಿರಿಯ ಬ್ರಹ್ಮಚಾರಿಗಳು ಯಾವಾಗಲೂ ಭಾವಿಸುತ್ತಿರಬೇಕೆಂಬುದು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರ ಆಶಯವಾಗಿತ್ತು. ಶ್ರೀರಾಮಕೃಷ್ಣರಿಗೆ ಹಣ್ಣಿನ ನೈವೇದ್ಯವನ್ನು ಸಿದ್ಧಪಡಿಸುವಾಗ ಒಬ್ಬ ಯುವಸಾಧುವು ತೋರಿದ ನಿರ್ಲಕ್ಷ್ಯತನಕ್ಕಾಗಿ ಆತನನ್ನು ನಿಂದಿಸುತ್ತ, ಸ್ವಾಮಿ ಶಿವಾನಂದರು ಹೀಗೆ ಹೇಳುತ್ತಾರೆ: “ನೀನು ಎಂಥ ಸೇವೆ ಮಾಡುತ್ತಿದ್ದೀಯೆ! ಬಾಳೆಹಣ್ಣುಗಳು ಮತ್ತು ಕಿತ್ತಲೆಹಣ್ಣುಗಳಲ್ಲಿ ಇರುವ ನಾರನ್ನು ನೀನು ಸರಿಯಾಗಿ ತೆಗೆದಿಲ್ಲ. ಶ್ರೀರಾಮಕೃಷ್ಣರ ಸೇವೆ ಮಾಡುವಾಗ, ಇಂತಹ ತಪ್ಪುಗಳು ಮರುಕಳಿಸದಂತೆ ಎಚ್ಚರಿಕೆ ವಹಿಸು. ಅವರು ಜೀವಂತಮೂರ್ತಿ. ಆದ್ದರಿಂದ ಅವರನ್ನು ಬಹಳ ಎಚ್ಚರಿಕೆಯಿಂದ ಆರಾಧಿಸು. ಅವರು ನಮ್ಮ ಪೂಜೆಯನ್ನು ಸ್ವೀಕರಿಸುತ್ತಿದ್ದಾರೆ. ನಾನು ಅದನ್ನು ನೋಡುತ್ತಿದ್ದೇನೆ.”

ಸ್ವಾಮಿ ವಿವೇಕಾನಂದರು ಕೂಡ ಈ ಅಂಶಕ್ಕೆ ಬಹಳ ಒತ್ತುಕೊಟ್ಟು ಹೇಳಿದ್ದರು, “ಭಗವಂತನು ಶ್ರೀರಾಮಕೃಷ್ಣ ರೂಪವನ್ನು ಇನ್ನೂ ತ್ಯಜಿಸಿಲ್ಲ. ಕೆಲವರು ಅವರನ್ನು ಇನ್ನೂ ಈ ರೂಪದಲ್ಲಿ ದರ್ಶಿಸುತ್ತಿದ್ದಾರೆ ಮತ್ತು ಅವರಿಂದ ಉಪದೇಶವನ್ನೂ ಪಡೆಯುತ್ತಿದ್ದಾರೆ. ಇಚ್ಛೆಯಿದ್ದರೆ, ಎಲ್ಲರೂ ಅವರನ್ನು ನೋಡಬಹುದು.”

### ಮಠದ ಪ್ರಾಂಗಣ

ಮುಖ್ಯದೇವಾಲಯದ ಹಿಂದುಗಡೆ, ಆಗ್ನೇಯ ದಿಕ್ಕಿನಲ್ಲಿ ಮಠದ ಪ್ರಾಂಗಣವನ್ನು ಕಾಣುತ್ತೇವೆ. ಇಲ್ಲಿ ಬಹಳ ಹಳೆಯ ಕಾಲದ ಎರಡು ಕಟ್ಟಡಗಳಿವೆ.

ಬೇಲೂರು ಮಠವು ರಾಮಕೃಷ್ಣ ಮಠದ ಸ್ವಾಧೀನಕ್ಕೆ ಬಂದದ್ದು, ಫೆಬ್ರವರಿ ೧೮೯೮ ರಂದು. (ಮೊದಲಿಗೆ ಕೇವಲ ೭.೩ ಎಕರೆಗಳಷ್ಟು ಭೂಮಿ ಮಾತ್ರವೇ ಇತ್ತು. ಅನಂತರ ಕ್ರಮೇಣ, ಉಳಿದ ಭಾಗಗಳನ್ನು ಕೊಂಡುಕೊಳ್ಳಲಾಯಿತು.) ಈ ಜಾಗದ ಉತ್ತರ ದಿಕ್ಕಿನ ಬದಿಯಲ್ಲಿ ಒಂದು ಅಂತಸ್ತಿನ ಶಿಥಿಲವಾದ ಕಟ್ಟಡವೊಂದು, ಕೊಂಡುಕೊಳ್ಳುವ ಸಮಯದಲ್ಲಿಯೇ ಇತ್ತು.

ಅದನ್ನು ಸ್ವಾಮಿ ವಿಜ್ಞಾನಾನಂದಜಿ ಅವರ ಮೇಲ್ವಿಚಾರಣೆಯಲ್ಲಿ ನವೀಕರಿಸಲಾಯಿತು. ಇದಕ್ಕೆ ತಗಲಿದ ಖರ್ಚನ್ನು ಸ್ವಾಮಿ ವಿವೇಕಾನಂದರ ಅನುಯಾಯಿಯಾದ ಶ್ರೀಮತಿ ಒಲೆ ಬುಲ್ ಅವರು ಭರಿಸಿದರು. ಈ ಯೋಜನೆ ಸಂಪೂರ್ಣಗೊಳ್ಳಲು ಒಂದು ವರ್ಷ ಹಿಡಿಯಿತು.


ಮಠದ ಪ್ರಾಂಗಣ ಮತ್ತು ಮಹಡಿಯ ಮೇಲೆ ಹಳೆಯ ದೇವಸ್ಥಾನವಿರುವ ಕಟ್ಟಡ

೧೮೯೮ ನೇ ಇಸವಿ, ನವೆಂಬರ್ ೧೨ ರಂದು ಶ್ರೀಮಾತೆ ಶಾರದಾದೇವಿಯವರು ಬೇಲೂರು ಮಠಕ್ಕೆ ಭೇಟಿಕೊಟ್ಟಿದ್ದರು. ಆ ಸಮಯದಲ್ಲಿ ನವೀಕರಣ ಕಾರ್ಯವು ಇನ್ನೂ ನಡೆಯುತ್ತ ಇತ್ತು. ಅವರು, ತಾವು ದಿನನಿತ್ಯ ಪೂಜಿಸುತ್ತಿದ್ದ ಶ್ರೀರಾಮಕೃಷ್ಣರ ಚಿತ್ರವನ್ನು ತಮ್ಮೊಂದಿಗೆ ತಂದಿದ್ದರು. ಹಳೆಯ ಕಟ್ಟಡದ ಒಂದು ಭಾಗವನ್ನು ಶುಚಿಗೊಳಿಸಲಾಗಿತ್ತು. ಅಲ್ಲಿ ಅದನ್ನು ಇಟ್ಟು ಶ್ರೀಮಾತೆಯವರು ಪೂಜಿಸಿದರು.

ನಾವೀಗ ಮಠದ ಪ್ರಾಂಗಣವನ್ನು ಪ್ರವೇಶಿಸೋಣ. ನಮ್ಮ ಮುಂದುಗಡೆ ಇರುವ ಕಟ್ಟಡ ಸಂಕೀರ್ಣ (ಚಿತ್ರ ನೋಡಿ) ಮತ್ತು ಬಲಕ್ಕಿರುವ ಕಟ್ಟಡ – ಇದಿಷ್ಟೇ ಸ್ವಾಮಿ ವಿವೇಕಾನಂದರ ಕಾಲದಲ್ಲಿ ಇದ್ದ ಬೇಲೂರು ಮಠ. ನಮ್ಮ ಎಡಗಡೆ ಇರುವ ಕಟ್ಟಡ ಸಂಕೀರ್ಣ, ಇದನ್ನು ಈಗ 'ಮಠದ ಕಛೇರಿ' ಎಂದು ಕರೆಯುತ್ತಾರೆ, ಆಮೇಲೆ ಸೇರಿಸಿದ್ದು.

ಈ ಪ್ರಾಂಗಣವು ಒಂದು ಪವಿತ್ರ ತಾಣ. ಶ್ರೀರಾಮಕೃಷ್ಣರು ಇಲ್ಲಿ ಅಡ್ಡಾಡುತ್ತಿದ್ದಂತೆ ಸ್ವಾಮಿ ಶಿವಾನಂದರು ದರ್ಶನವೊಂದನ್ನು ಕಂಡರು. ಈ ಅನುಭವದ ನಂತರ, ಈ ಸ್ಥಳವು ಶುಚಿಯಾಗಿ ಇರುವುದನ್ನು ಮತ್ತು ಇದರ ನಿರ್ವಹಣೆ ಚೆನ್ನಾಗಿ ಆಗುತ್ತಿರುವುದನ್ನು ಅವರು ಖಾತರಿ ಮಾಡಿಕೊಳ್ಳುತ್ತಿದ್ದರು. ಈ ಸ್ಥಳವನ್ನು ಶುದ್ಧ ಮಾಡುತ್ತಿದ್ದ ಒಬ್ಬ ಬ್ರಹ್ಮಚಾರಿಗೆ ಅವರು ಹೀಗೆ ಹೇಳಿದರು: "ಮಗು, ನೀನು ಇದನ್ನು ಸರಿಯಾಗಿ ಮಾಡುತ್ತಿಲ್ಲ. ಅಲ್ಲಿ ಇನ್ನೂ ಸ್ವಲ್ಪ ಕಸ ಉಳಿದಿದೆ. ಸುಟ್ಟುಹೋದ ಬೆಂಕಿಕಡ್ಡಿಯ ತುಂಡುಗಳು ಅಲ್ಲಿ ಹರಡಿವೆ. ಶ್ರೀರಾಮಕೃಷ್ಣರು ಇಲ್ಲಿ ನಡೆದಾಡುತ್ತಾರೆ. ಈ ಸ್ಥಳವನ್ನು ಜಾಗರೂಕತೆಯಿಂದ ಶುಚಿಗೊಳಿಸು. ಅವರು ನಡೆದಾಡುವಾಗ ಅವರ ಕಾಲಿಗೆ ಯಾವುದೂ ತಗಲಬಾರದು. ನಡೆಯುವಾಗ ಅವರಿಗೆ ಯಾವ ನೋವೂ ಆಗಬಾರದು."

ಈ ಪ್ರಾಂಗಣವು ಶ್ರೀಮಾತೆಯವರ ಸಾನ್ನಿಧ್ಯದಿಂದಲೂ ಪುನೀತವಾಗಿದೆ. ಅವರು ೧೯೧೬ ರ ದುರ್ಗಾಪೂಜೆಯ ಸಮಯದಲ್ಲಿ ಬೇಲೂರು ಮಠಕ್ಕೆ ದಯಮಾಡಿಸಿದ್ದರು. ಆಗ ಸಾಧುಗಳು ಮತ್ತು ಭಕ್ತರು, ಹಳೆಯ ದೇವಮಂದಿರದ ಕೆಳಗಿನ ಅಂಗಣದಲ್ಲಿ ತರಕಾರಿಯನ್ನು ಹೆಚ್ಚುವ ಕೆಲಸದಲ್ಲಿ ತನ್ಮಯರಾಗಿದ್ದರು. ಈಗ ಅದು ಮಠದ ಕಛೇರಿಯ ಒಂದು ಭಾಗವಾಗಿದೆ. ಆ ದಿನಗಳಲ್ಲಿ ಆ ಸ್ಥಳವನ್ನು, ಸಾಮಾನ್ಯ ಉಗ್ರಾಣವಾಗಿಯೂ, ಅಡುಗೆ ಮನೆ ಮತ್ತು ಊಟದ ಮನೆಯಾಗಿಯೂ ಉಪಯೋಗಿಸುತ್ತಿದ್ದರು. ಭಕ್ತರು ಮತ್ತು ಸಾಧುಗಳು ತರಕಾರಿ ಹೆಚ್ಚುತ್ತಿದ್ದುದನ್ನು ಕಂಡು, ಆ ಕಟ್ಟಡದ ಮುಂದೆ ನಡೆದಾಡುತ್ತಿದ್ದ ಶ್ರೀಮಾತೆ ಹೀಗೆ ಉದ್ಗರಿಸಿದರು: "ನನ್ನ ಮಕ್ಕಳು ಅದೆಷ್ಟು ಚೆನ್ನಾಗಿ ತರಕಾರಿ ಹೆಚ್ಚುತ್ತಿದ್ದಾರೆ!" ಅದಕ್ಕೆ ರಮಣಿ ಎಂಬ ಬ್ರಹ್ಮ ಚಾರಿ (ಮುಂದೆ ಸ್ವಾಮಿ ಜಗದಾನಂದಜಿ) ಉತ್ತರ ಕೊಟ್ಟನು: "ನಮ್ಮ ಉದ್ದೇಶ ಜಗನ್ಮಾತೆಯ ಕೃಪೆಯನ್ನು ಹೊಂದುವುದು – ಅದು ಧ್ಯಾನದ ಮೂಲಕವಾಗಲಿ, ಇಲ್ಲವೇ ತರಕಾರಿ ಹೆಚ್ಚುವ ಮೂಲಕವಾಗಲಿ."

ಈ ಪ್ರಾಂಗಣವು ಸ್ವಾಮಿ ವಿವೇಕಾನಂದರ ಸ್ಮರಣೆಗಳೊಂದಿಗೆ ಎಂದೆಂದಿಗೂ ಅವಿನಾಭಾವ ಸಂಬಂಧ ಹೊಂದಿದೆ. ೧೯೦೨, ಜುಲೈ ೪ ರಂದು, ಅಂದರೆ ಅವರ ಭೌತಿಕ ಜೀವನದ ಕಟ್ಟಕಡೆಯ ದಿನದಂದು, ಪ್ರಾತಃಕಾಲ ಶ್ರೀರಾಮಕೃಷ್ಣರ ಶಯನಗೃಹದಲ್ಲಿ ಸುಮಾರು ಮೂರು ಗಂಟೆಗಳ ಕಾಲ ಅವರು ಧ್ಯಾನ ಮಾಡಿದರು. ಅನಂತರ ಪೂಜಾಮಂದಿರದ ಮೆಟ್ಟಿಲುಗಳಿಂದ ಇಳಿದುಬಂದು, ಮಠದ ಈ ಪ್ರಾಂಗಣದಲ್ಲಿ ಅತ್ತಿಂದಿತ್ತ ಅಡ್ಡಾಡಿದರು. ಆಗ ಅವರ ಮನಸ್ಸು ಅಂತರ್ಗತವಾಗಿತ್ತು. ಹಠಾತ್ತನೆ, ಅವರ ಹತ್ತಿರವಿದ್ದ ಸ್ವಾಮಿ ಪ್ರೇಮಾನಂದರಿಗೆ (ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಲ್ಲಿ ಒಬ್ಬರು) ಕೇಳಿಸುವಷ್ಟು ಗಟ್ಟಿಯಾಗಿ ತಮಗೆ ತಾವೇ ಹೀಗೆ ಹೇಳಿಕೊಂಡರು: **"ಇನ್ನೊಬ್ಬ ವಿವೇಕಾನಂದನೇನಾದರೂ ಇದ್ದಿದ್ದರೆ, ಈ ವಿವೇಕಾನಂದ ಏನು ಸಾಧಿಸಿದನೆಂಬುದನ್ನು ತಿಳಿದಿರುತ್ತಿದ್ದ! ಹೀಗಾದರೂ, ಕಾಲಾಂತರದಲ್ಲಿ ಅದೆಷ್ಟು ವಿವೇಕಾನಂದರು ಹುಟ್ಟಿಬರುವರೋ!"**

### ಸ್ವಾಮೀಜಿಯ ಮಾವಿನ ಮರ

ಮಠದ ಪ್ರಾಂಗಣದ ಪೂರ್ವದಿಕ್ಕಿನಲ್ಲಿ ಒಂದು ಮಾವಿನ ಮರ ಬೆಳೆದುನಿಂತಿದೆ. ಅದು ಈ ಭೂಮಿಯನ್ನು ಕೊಂಡು ಕೊಂಡಾಗಿನಿಂದ ಇದ್ದ ಮರಗಳಲ್ಲಿ ಒಂದು. ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯಲ್ಲಿ ಇದರ ಬಗ್ಗೆ ಹೀಗೆ ಬರೆದಿದೆ: "ಸ್ವಾಮೀಜಿಯ ಇನ್ನೊಂದು ಮೆಚ್ಚಿನ ಕುಳಿತುಕೊಳ್ಳುವ ಸ್ಥಳವೆಂದರೆ, ಒಂದು ದೊಡ್ಡ ಮಾವಿನ ಮರದ ಕೆಳಗೆ. ಅದು ಶ್ರೀರಾಮಕೃಷ್ಣರ ಪೂಜಾಮಂದಿರ ಮತ್ತು ಮಠದ ಕಟ್ಟಡದ ಮಧ್ಯೆ ಇದೆ. ಇಲ್ಲಿ ಬೆಳಗಿನ ಜಾವದಲ್ಲಿ ಸ್ವಾಮೀಜಿ ಕುಳಿತಿರುವುದನ್ನು ನೋಡಬಹುದಾಗಿತ್ತು. ಅಲ್ಲಿ ಅವರು ಒಂದು ಕ್ಯಾನ್‌ವಾಸ್ ಮಂಚದ ಮೇಲೆ, ತಮ್ಮ ಪತ್ರವ್ಯವಹಾರವನ್ನು ಗಮನಿಸುತ್ತಲೋ, ಲೇಖನಗಳನ್ನು ಬರೆಯುತ್ತಲೋ, ಓದುತ್ತಲೋ ಅಥವಾ ಮಾತುಕತೆಯಾಡುತ್ತಲೋ ಕುಳಿತಿರುತ್ತಿದ್ದರು."